**ಕರ್ನಾಟಕ ಅರಣ್ಯ ಇಲಾಖೆ**

ಸಂ:ಬಿ2/ಜಿಎಫ್ಎಲ್/ಎಫ್‌ಸಿ/ರಸ್ತೆ/ಕಾ.ಅಗ್ರೋ/0.7137/2024-25/2416

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಚೇರಿ
ಬಾಗಲಕೋಟೆ ವಿಭಾಗ, ಬಾಗಲಕೋಟೆ,
ದಿನಾಂಕ: 29 /03/2025

ಇವರಿಗೆ,

ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
ಬೆಳಗಾವಿ ವೃತ್ತ, ಬೆಳಗಾವಿ.

ಮಾನ್ಯರೆ,

ವಿಷಯ: Diversion of 0.7188 (Revised from 0.7137 Ha) of Forest land in Hoolageri Village, Badami Taluk, Bagalkote District for construction of Approach Road to Kartik Agro Industries Pvt.Ltd, Hoolageri village, Taluk: Badami Dist: Bagalkot (Proposal No. FP/KA/ROAD/144076/2021).

ಉಲ್ಲೇಖ:
1) ಘನ ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಪ್ರಾದೇಶಿಕ ಕಚೇರಿ (ದಕ್ಷಿಣ ವಲಯ), ಬೆಂಗಳೂರುರವರ ಕಚೇರಿ ಪತ್ರ ಸಂಖ್ಯೆ:4-KRB 1446/2023-BAN/ ದಿ: 18-11-2024.
2) ಘನ ಕರ್ನಾಟಕ ಸರಕಾರದ ಪತ್ರ ಸಂಖ್ಯೆ: FEE 107 FLL 2022 ದಿನಾಂಕ: 22-11-2024
3) ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು (VSESA), ಬೆಂಗಳೂರುರವರ ಪತ್ರ ಸಂಖ್ಯೆ: KFD/HoFF/A5-2(GFL)/31/2021-FC ದಿನಾಂಕ: 30-11-2024.
4) ತಮ್ಮ ಕಚೇರಿ ಪತ್ರ ಸಂಖ್ಯೆ: A7/LND/FC/Road/CR-2022-23/24-25/2252 ದಿ: 12-12-2024.
5) ಈ ಕಚೇರಿ ಪತ್ರ ಸಮ ಸಂಖ್ಯೆ ದಿ: 31-12-2024 ಮತ್ತು 27-01-2025
6) ವಲಯ ಅರಣ್ಯ ಅಧಿಕಾರಿ, ಬಾದಾಮಿರವರ ಪತ್ರ ಸಂಖ್ಯೆ: ವಅಅ/ಬಾದಾಮಿ/ ರಸ್ತೆ/ ಪ್ರಸ್ತಾವನೆ/2024-25/474 ದಿ:06-03-2025 (ಸ.ಅ.ಸಂ ಬಾಗಲಕೋಟೆ ಉಪ ವಿಭಾಗರವರ ಮುಖಾಂತರ)

-o-

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮೆ; ಕಾರ್ತಿಕ ಅಗ್ರೊ ಇಂಡಸ್ಟ್ರೀಜ್, ಹೂಲಗೇರಿ, ತಾ: ಬದಾಮಿ ಇವರು ಅರಣ್ಯ ಪ್ರದೇಶದಲ್ಲಿ ಸಂಪರ್ಕ ರಸ್ತೆಯ ನಿರ್ಮಾಣಕ್ಕಾಗಿ ಅರಣ್ಯ ಜಮೀನು ಬಳಸಿಕೊಳ್ಳಲು ಅನುಮತಿ ಕೋರಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲನೆ ಮಾಡಿ ಉಲ್ಲೇಖ (1)ರಡಿ ಮಾನ್ಯ ಕೇಂದ್ರ ಸರ್ಕಾರವು ಪ್ರಸ್ತುತ ಸದರಿ ಜಾಗದಲ್ಲಿ ಅಸ್ತಿತ್ವದಲ್ಲಿ ಇರುವ ಮಣ್ಣಿನ ರಸ್ತೆಯು ವನ (ಸಂರಕ್ಷಣ ವಃ ಸಂವರ್ಧನ) ಅಧಿನಿಯಮ 1980 ರ ಪೂರ್ವದ ರಸ್ತೆಯೋ ಅಥವಾ ನಂತರದ ರಸ್ತೆಯೋ ಎಂಬ ಬಗ್ಗೆ ಹಾಗೂ ಒಂದು ವೇಳೆ 1980 ರ ನಂತರ ನಿರ್ಮಾಣ ಮಾಡಿದ್ದಲ್ಲಿ ಅನುಮೋದನೆ ಪಡೆಯಲಾಗಿದೆಯೇ ಎಂಬ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಿ ವಿವರವಾದ ವರದಿಯನ್ನು ಸಲ್ಲಿಸಲು ಸೂಚಿಸಿದ್ದರನ್ವಯ ಉಲ್ಲೇಖ (5)ರಡಿ ವಲಯ ಅರಣ್ಯ ಅಧಿಕಾರಿ ಬಾದಾಮಿ ಇವರಿಗೆ ಈ ಬಗ್ಗೆ ಪರಿಶೀಲನೆ ಮಾಡಿ ವರದಿ ಸಲ್ಲಿಸಲು ತಿಳಿಸಲಾಗಿತ್ತು.

ಅದರಂತೆ, ವಲಯ ಅರಣ್ಯ ಅಧಿಕಾರಿ ಬಾದಾಮಿ ಇವರು ಉಲ್ಲೇಖ (6)ರಡಿ ವರದಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಬಾಗಲಕೋಟೆ ಉಪ ವಿಭಾಗ, ಬಾಗಲಕೋಟೆರವರ ಮುಖಾಂತರ ಈ ಕಚೇರಿಗೆ ಸಲ್ಲಿಸಿರುತ್ತಾರೆ.

ಸಂಬಂಧಿಸಿದ ಕೆರೂರ ಶಾಖೆಯ ಉಪ ವಲಯ ಅರಣ್ಯ ಅಧಿಕಾರಿ ಹಾಗೂ ಗಸ್ತು ಅರಣ್ಯ ಪಾಲಕರು ಕೆರೂರ ಗ್ರಾಮದ ಸುಮಾರು 1954, 1964 ಮತ್ತು 1969 ನೇ ಇಸ್ವಿಗಳಲ್ಲಿ ಜನಿಸಿರುವ ಹಿರಿಯ ನಾಗರಿಕರನ್ನು ವಿಚಾರಿಸಲಾಗಿ ಸದರಿ ಮಣ್ಣು ರಸ್ತೆಯನ್ನು 2005 ರಿಂದ ಈಚೆಗೆ ಕೆರಕಲಮಟ್ಟಿ ಗ್ರಾಮದ ರೈತರು ಅಪರೂಪಕ್ಕೆ ಎಂದರೆ ಬಿತ್ತನೆ, ರಾಶಿ ಸಮಯದಲ್ಲಿ ಉಪಯೋಗ ಮಾಡುತ್ತಿದ್ದು, ಇದೇ ರಸ್ತೆಯನ್ನು ಕಾರ್ತಿಕ ಅಗ್ರೋ ಫ್ಯಾಕ್ಟರಿಯವರು ಉಪಯೋಗಿಸುತ್ತಿದ್ದು ಸದರಿ ರಸ್ತೆ 2005 ರಿಂದ ಈಚೆಗೆ ಇದ್ದು, 1980 ರ ಪೂರ್ವದಲ್ಲಿ ನಿರ್ಮಾಣ ಮಾಡಿರುವುದಿಲ್ಲ ಎಂಬ ಬಗ್ಗೆ ಪಂಚರ

Scanned with OKEN Scanner

ಸಮಕ್ಷಮ ಪಂಚನಾಮೆಯನ್ನು ಜರುಗಿಸಿ, ಸದರಿ ಪಂಚನಾಮೆಯ ಪ್ರತಿಯನ್ನು ವಲಯ ಅರಣ್ಯ ಅಧಿಕಾರಿ ಬಾದಾಮಿ ಇವರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಉಪ ವಿಭಾಗ ಬಾಗಲಕೋಟೆರವರ ಮುಖಾಂತರ ಸಲ್ಲಿಸಿರುತ್ತಾರೆ.

ಪಂಚನಾಮೆ, ವಲಯ ಅರಣ್ಯ ಅಧಿಕಾರಿ ಬಾದಾಮಿ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಾಗಲಕೋಟೆ ಉಪ ವಿಭಾಗ ಬಾಗಲಕೋಟೆರವರ ವರದಿಯಿಂದ ಪ್ರಸ್ತಾಪಿತ ರಸ್ತೆಯನ್ನು 1980ಕ್ಕಿಂತ ಪೂರ್ವದಲ್ಲಿ ನಿರ್ಮಾಣ ಆಗಿದ್ದು ಇರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಪ್ರಸ್ತುತ ಇರುವ ಮಣ್ಣಿನ ರಸ್ತೆಯ ಕುರಿತು ಪರಿಶೀಲಿಸಲಾಗಿ ಸದರಿ ರಸ್ತೆಗೆ ವನ (ಸಂರಕ್ಷಣ ವಃ ಸಂವರ್ಧನ) ಅಧಿನಿಯಮ-1980 ರಡಿ ಅಥವಾ ಇನ್ನಿತರ ಯಾವುದೇ ಅರಣ್ಯ ಕಾಯ್ದೆಯಡಿ ಮಂಜೂರಾತಿಯನ್ನು ಪಡೆದುಕೊಂಡಿರುವುದು ಇರುವುದಿಲ್ಲ. ಆದಕಾರಣ ಪ್ರಸ್ತುತ ಉಪಯೋಗಿ ಸಂಸ್ಥೆಯವರು ಪರಿವೇಶ್ ತಂತ್ರಾಂಶದಲ್ಲಿ ಸಲ್ಲಿಸಿರುವ ಪ್ರಸ್ತಾವನೆ ಸಂಖ್ಯೆ: **FP/KA/ROAD/144076/2021** ನ್ನು ವನ (ಸಂರಕ್ಷಣ ವಃ ಸಂವರ್ಧನ) ಅಧಿನಿಯಮ 1980 ರಡಿ ಪರಿಗಣಿಸಲು ತಮ್ಮಲ್ಲಿ ಗೌರವಪೂರ್ವಕವಾಗಿ ಕೋರಲಾಗಿದೆ.

ತಮ್ಮ ವಿಶ್ವಾಸಿ
**(ಸಹಿ/-)**
ಉಪ ಅರಣ್ಯ ಸಂರಕ್ಷಣಾಧಿಕಾರಿ
ಬಾಗಲಕೋಟೆ ವಿಭಾಗ, ಬಾಗಲಕೋಟೆ.

ಪ್ರತಿಯನ್ನು ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು (VSESA), ಬೆಂಗಳೂರುರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಬಾಗಲಕೋಟೆ ಉಪ ವಿಭಾಗ ಬಾಗಲಕೋಟೆ ಮತ್ತು ವಲಯ ಅರಣ್ಯ ಅಧಿಕಾರಿ ಬಾದಾಮಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಪ್ರತಿಯನ್ನು ಉಪಾಧ್ಯಕ್ಷರು, ಕಾರ್ತಿಕ ಅಗ್ರೋ ಇಂಡಸ್ಟ್ರೀಜ್ ಪ್ರೈ.ಲಿ, ಹೂಲಗೇರಿ, ತಾ: ಬಾದಾಮಿ ಜಿ: ಬಾಗಲಕೋಟೆ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ
ಬಾಗಲಕೋಟೆ ವಿಭಾಗ, ಬಾಗಲಕೋಟೆ.

ರವಾನಿಸಿದ ದಿನಾಂಕ 21-03-2024

ಗುಮಾಸ್ತರು